ಊ) ರಾಜ್ಯಕ್ಕೆ ಹೆಚ್ಚಿನ ಪ್ರಮಾಣದ ಸೀಮೆಎಣ್ಣೆ ಹಂಚಿಕೆ ಮಾಡಲು ಕೇಂದ್ರ ಸರ್ಕಾರವನ್ನು ಕೋರಲಾಗಿದೆ. ಅವರು ಹೆಚ್ಚಿನ ಪ್ರಮಾಣ ನೀಡಿದರೆ ಬೆಳಗಾಂ ಜಿಲ್ಲೆಯನ್ನು ಸೇರಿ ಎಲ್ಲಾ ಜಿಲ್ಲೆಗಳಿಗೂ ಹೆಚ್ಚಿನ ಪ್ರಮಾಣದ ವಿತರಣೆ ಮಾಡಲಾಗುವುದು.

ರಾಜ್ಯದಲ್ಲಿ ಖಾಲಿ ಇರುವ ಮುನ್ಸೀಫರ ಹುದ್ದೆ ಭರ್ತಿ ಬಗ್ಗೆ.

1998. ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಕಾನೂನು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ರಾಜ್ಯದಲ್ಲಿ ಖಾಲಿಯಿರುವ ಮುನ್ಸೀಫ್ ಮ್ಯಾಜಿಸ್ಟ್ರೇಟರ್‌ಗಳ ಹುದ್ದೆಗಳ ಸಂಖ್ಯೆ ಎಷ್ಟು ;

2) ಈಗಾಗಲೇ ಆಯ್ಕೆ ಮಾಡಿರುವ ಹುದ್ದೆಗಳ ಸಂಖ್ಯೆಯೆಷ್ಟು ;

3) ಆಯ್ಕೆ ಮಾಡಿದವರಲ್ಲಿ ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗಿದೆ ಹಾಗೂ ಭರ್ತಿ ಮಾಡದೇ ಉಳಿದಿರುವ ಹುದ್ದೆಗಳ ಸಂಖ್ಯೆ ಎಷ್ಟು ;

4) ಭರ್ತಿ ಮಾಡುವಲ್ಲಿ ಆದ ವಿಳಂಬಕ್ಕೆ ಕಾರಣವೇನು ;

5) ಖಾಲಿಯಾಗಿರುವ ಹುದ್ದೆ ತುಂಬಲು ಹಾಗೂ ಆಯ್ಕೆಯಾದವರನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾನೂನು ಸಚಿವರು) :

1) 41.

2) 37.

3) ಉದ್ಭವಿಸುವುದಿಲ್ಲ.

4) ಕಾದಿರಿಸಲಾದ ಮಾಸಲಾತಿ ಹುದ್ದೆಗಳನ್ನು ಭರ್ತಿ ಮಾಡಲಾಗದ ಹೊರತು. ಸಾಮಾನ್ಯ ವರ್ಗದ ಅಭ್ಯರ್ಥಿಗಳನ್ನು ನೇಮಕಾತಿ ಮಾಡಲು ಸರ್ಕಾರ ಒಪ್ಪಲಿಲ್ಲ. ಆದ್ದರಿಂದ. ನೇಮಕಾತಿ ನಿಯಮಗಳನ್ನು ಬದಲಾಯಿಸಿ ಭರ್ತಿ ಮಾಡಲು ಕಾಲಾವಕಾಶ ಬೇಕಾಗಿದ್ದರಿಂದ. ವಿಳಂಬವಾಯಿತು.

5) ಇದು ಸರ್ಕಾರದ ತೀರ್ಮ ಪರಿಶೀಲನೆಯಲ್ಲಿದೆ.

ಚೇರ್ಮನ್ : ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀ ಟಿ.ಬಿ. ಜಯಚಂದ್ರ : ಉಪಾಧ್ಯಕ್ಷರೆ, ಬಹಳಷ್ಟು ಪ್ರಶ್ನೆಗಳಿಗೆ ಉತ್ತರಗಳು ಬರುವುದಿಲ್ಲ. ನಾವು ಪ್ರಶ್ನೆಯನ್ನು ಮಂಡಿಸಿದಾಗ. ಅದಕ್ಕೆ ಆಗ ಉತ್ತರ ಇರುವುದಿಲ್ಲ. ನಾವು ಹೋಗಿ ಹುಡುಕಿದರೂ ಸಹ ಉತ್ತರ ಬರುವ ಪ್ರಯತ್ನವಿಲ್ಲ. ಹೀಗೇ ಬಿಟ್ಟರೆ ಅದು ಯಾವಾಗ ಬರುತ್ತದೆ ? ನಮಗೆ ಯಾವ ಪ್ರಶ್ನೆಗಳು ಬಹಳ ಪ್ರಮುಖವಾಗಿರುತ್ತವೆ, ಅಂತಹ ಪ್ರಶ್ನೆಗಳು ಅನ್‌ಸ್ಟಾರ್ಡ್ ಆಗುತ್ತವೆ. ಮತ್ತು ಉತ್ತರ ಬರುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಒಟ್ಟು 68 ಪ್ರಶ್ನೆಗಳಲ್ಲಿ 16 ಪ್ರಶ್ನೆಗಳಿಗೆ ಮಾತ್ರ ಉತ್ತರ ಬಂದಿಲ್ಲ. ಇಷ್ಟು ಪ್ರಮಾಣದಲ್ಲಿ ಯಾವೊತ್ತೂ ಉತ್ತರ ಬಂದಿರುವುದಿಲ್ಲ.

ಶ್ರೀ ಬಾಬುರಾವ್ ಚವಾಣ್ : ಆ 16 ಪ್ರಶ್ನೆಗಳು ಬಹಳ ಮಹತ್ವವಾದಂತವುಗಳು. ಆ ಪ್ರಶ್ನೆಗಳಿಗೂ ಉತ್ತರ ಬರಬೇಕಾಗಿತ್ತು.

ಚೇರ್ಮನ್ : ಅಂತಹ ಪ್ರಶ್ನೆಗಳನ್ನು ಬರೆದು ಮಂತ್ರಿಗಳಿಗೆ ಕಳುಹಿಸಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಯಾವ ಪ್ರಶ್ನೆಯನ್ನು ಸ್ಟಾರ್ ಮಾಡಬೇಕು, ಯಾವುದನ್ನು ಅನ್‌ಸ್ಟಾರ್ಡ್ ಮಾಡಬೇಕೆಂಬುದರ ಬಗ್ಗೆ ನಿಯಮಗಳಿವೆ. ಅದು ಶಾಸಕಾಂಗಕ್ಕೆ ಬಿಟ್ಟಿಂಥ ವಿಚಾರ. ಅದರಲ್ಲಿ ಸರ್ಕಾರ ಕೈ ಹಾಕುವ ಪ್ರಶ್ನೆಯೇ ಬರುವುದಿಲ್ಲ.

ಶ್ರೀ ಬಾಬುರಾವ್ ಚವಾಣ್ : ಜಯಚಂದ್ರರವರು ಸ್ಟಾರ್ಡ್ ಎನ್ನುವ ವಿಚಾರದಲ್ಲಿ ಹೇಳುತ್ತಿಲ್ಲ.

ಚೇರ್ಮನ್ : ಉತ್ತರ ತರಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈಗ ಮಾನ್ಯ ಅರಣ್ಯ ಮಂತ್ರಿಗಳು ಒಂದು ಹೇಳಿಕೆ ಕೊಡುತ್ತಾರೆ.

ಮಂತ್ರಿಗಳ ಹೇಳಿಕೆ

ನಾಗರಹೊಳೆ ಬೆಂಕಿ ಅಪಘಾತದ ಬಗ್ಗೆ

† ಶ್ರೀ ಈ.ಟಿ. ಶಂಬುನಾಥ್ (ರಾಜ್ಯ ಅರಣ್ಯ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ. ಗುರುವಾರ ಅಂದರೆ ದಿನಾಂಕ 12-3-92ರ ರಾತ್ರಿ ನಲ್ಕೇರಿ ಕಾದಿಟ್ಟ ಅರಣ್ಯದ ಸಮೀಪದಲ್ಲಿರುವ ಬಾಡಗಾ ಗ್ರಾಮದ ಶ್ರೀ ಎಂ.ವಿ. ಚಿನ್ನಪ್ಪ. ಎಂಬುವರು ಕಾಡಿಗೆ ಹೋಗಿದ್ದ ಎಮ್ಮೆಗಳನ್ನು ಮನೆಗೆ ವಾಪಸ್ಸು ಕರೆದುಕೊಂಡು ಬರಲು ಶ್ರೀ ಕುಂಜಪ್ಪ ಎಂಬ ಸ್ನೇಹಿತರೊಡನೆ ಹೊರಟರು. ಶುಕ್ರವಾರ ಅಂದರೆ ದಿನಾಂಕ 13-3-92ನೇ ಬೆಳಿಗ್ಗೆ ಚಿನ್ನಪ್ಪನ ಜೊತೆಗೆ ಹೋಗಿದ್ದ ಕುಂಜಪ್ಪ ಎಂಬುವರು. ಚಿನ್ನಪ್ಪನ ಮನೆಗೆ ಬಂದು ಅವರಿಗಾಗಿ ವಿಚಾರಿಸಿದರು. ಅಲ್ಲಿ ಕೇವಲ ಎಮ್ಮೆಗಳು ಇದ್ದುವೆ ಹೊರತು ಚಿನ್ನಪ್ಪನವರು (ಚಿಪ್ಪ). ಇರಲಿಲ್ಲ. ಆ ಸಮಯದಲ್ಲಿ ಕುಂಜಪ್ಪನವರು ಹಿಂದಿನ ದಿನ ರಾತ್ರಿ ಚಿನ್ನಪ್ಪನವರೊಡನೆ ಕಾಡಿನಲ್ಲಿ ಕೋಡಂಗ ಎಂಬ ಕಡೆ ಎಮ್ಮೆಗಳನ್ನು ಹುಡುಕುತ್ತಿದ್ದಾಗ ಒಂದು ಗುಂಡೇಟಿನ ಶಬ್ದ ಕೇಳಿತು. ಆ ಶಬ್ದವನ್ನು ಕೇಳಿದೊಡನೆ ಚಿನ್ನಪ್ಪನವರು ಓಡಿ ಹೋಗು ಎಂದು ನನಗೆ ಹೇಳಿದರು; ಅದೇ ರೀತಿ ತಾನು ಓಡಿದೆನು ಎಂದು ತಿಳಿಸಿರುತ್ತಾರೆ. ತದನಂತರ, ಕುಂಜಪ್ಪನವರು ಮಾಚಯ್ಯ ಎಂಬುವರ ಜೊತೆ ಗುಂಡೇಟಿನ ಶಬ್ದ ಕೇಳಿದ ಸ್ಥಳಕ್ಕೆ ಹೋಗಿ ಅಲ್ಲಿ ಗುಂಡಿನೇಟಿನಿಂದ ಸತ್ತು ಬಿದ್ದಿದ್ದ ಚಿನ್ನಪ್ಪನವರ ಮೃತ ದೇಹವನ್ನು ಕಂಡರು. ಅದೇ ದಿನ ಅಂದರೆ ದಿನಾಂಕ 13-3-92ರಂದು ಕುಟ್ಟ ಪೋಲೀಸ್ ಠಾಣೆಗೆ ಒಂದು ಅರ್ಜಿಯನ್ನು ಸಲ್ಲಿಸಿ ಅರಣ್ಯಾಧಿಕಾರಿಗಳು ಗುಂಡಿನೇಟಿನಿಂದ ಶ್ರೀ ಚಿನ್ನಪ್ಪವರನ್ನು ಕೊಂದಿದ್ದಾರೆಂದು ಪೋಲೀಸರಿಗೆ ದೂರಿದರು. ಏತನ್ಮಧ್ಯೆ ಅದೇ ದಿನ ಸಾಯಂಕಾಲ ಂದರೆ ದಿನಾಂಕ 13-3-92ರ ಸಾಯಂಕಾಲ ವನ್ಯ ಪಾಣಿ ವಿಭಾಗದ ವಲಯ ಅರಣ್ಯಾಧಿಕಾರಿ ಶ್ರೀ ಚಿನ್ನಪ್ಪನವರು. ಹುಣಸೂರು ವಿಭಾಗದ ಅರಣ್ಯಾಧಿಕಾರಿ ಶ್ರೀ ಶ್ರೀನಿವಾಸ್‌ರವರನ್ನು ಸಂಪರ್ಕಿಸಿ ತನಗೆ ಸಿಕ್ಕಿದ ಮಾಹಿತಿ ಪ್ರಕಾರ ಇಲ್ಲಿ ಗಲಾಟೆಯಾಗುವ ಸಂಭವವಿದೆಯೆಂದು ತಿಳಿಸಿದರು.

ತಕ್ಷಣವೇ ವಿಭಾಗ ಅರಣ್ಯಾಧಿಕಾರಿ ಶ್ರೀ ಶ್ರೀನಿವಾಸ್‌ರವರು. ಮಡಿಕೇರಿಯ ಜಿಲ್ಲಾ ದಂಡಾಧಿಕಾರಿ ಮತ್ತು ಪೋಲೀಸ್ ಸೂಪರಿಂಟೆಂಡೆಂಟ್‌ರವರಿಗೂ ಹಾಗೂ ಮೈಸೂರು ಪೋಲೀಸ್ ವಲಯ ಅಧಿಕಾರಿ